**ಒ.ಎಸ್.ನಂಬ್ರ: 364/2015 ಪಿ.ಡಬ್ಲ್ಯೂ : 1**

ದಿನಾಂಕ: 15-10-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ ಎಮ್.ಎಮ್.ಎಚ್. ವಕೀಲರಿಂದ**

ನನ್ನ ಉದ್ಯೋಗ ಕೃಷಿ ಆಗಿರುತ್ತದೆ. 1 ನೇ ವಾದಿ ನನ್ನ ತಾಯಿ. 1 ನೇ ವಾದಿಗೆ 4 ಜನ ಮಕ್ಕಳಿದ್ದು ಅವರಲ್ಲಿ ಒಬ್ಬರು ತೀರಿಹೋಗಿದ್ದು, ಈಗ ಮೂರು ಜನ ಮಾತ್ರ ಇರುತ್ತೇವೆ. ಹಿರಿಯ ಸಹೋದರ ಡಾಕ್ಟರ್ ನಾಗಿದ್ದು ಕಿರಿಯ ಸಹೋದರ ಅಂಗಡಿ ವ್ಯವಹಾರ ಮಾಡಿಕೊಂಡಿದ್ದಾನೆ. ನಾನು ಕೃಷಿ ಮಾಡುವ ಆಸ್ತಿ ಸುಮಾರು 4-5 ಎಕರೆ ಇರುತ್ತದೆ. ಕೃಷಿಯಿಂದ ವಾರ್ಷಿಕ ಉತ್ಪನ್ನ ಎಷ್ಟು ಬರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯರ ಪರಿಚಯ ಇರುತ್ತದೆ. ಊರಲ್ಲಿ ಪ್ರತಿವಾದಿ 4 ,5 ಮತ್ತು 7 ರವರು ಮಾತ್ರ ಇರುತ್ತಾರೆ , ಉಳಿದವರು ಬೇರೆ ಊರಿನಲ್ಲಿ ವಾಸವಿರುತ್ತಾರೆ. 4 ಮತ್ತು 7 ನೇ ಪ್ರತಿವಾದಿ ಟೇಲರಿಂಗ್ ಕೆಲಸ ಮಾಡುತ್ತಿದ್ದಾರೆ. 5 ನೇ ಪ್ರತಿವಾದಿ ಮನೆ ಕೆಲಸ ಮಾಡಿಕೊಂಡಿದ್ದಾರೆ.

ಪ್ರತಿವಾದಿಯರಿಗೆ ಆಸ್ತಿಯಿದೆ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯಿಂದ ಪ್ರತಿವಾದಿಯರು ಮನೆಗೆ ಅರ್ಧ ಕಿ.ಮೀಟರ ದೂರ ಇರುತ್ತದೆ. ಸಾಕ್ಷಿ ಮುಂದುವರೆದು ದಾವಾ ಸ್ಥಳದಿಂದ 200 ಮೀಟರ ಅಂತರದಲ್ಲಿ ಪ್ರತಿವಾದಿಯರ ಮನೆ ಇದೆ ಎಂದು ನುಡಿಯುತ್ತಾರೆ. 200 ಮೀಟರ ಅಂತರದಲ್ಲಿ ಪ್ರತಿವಾದಿಯರ ಮನೆ ಇದ್ದರು ಸಹ ಅವರ ಆಸ್ತಿಯಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯಲ್ಲಿ ಯಾರು ಗ್ರಾಮ ಪಂಚಾಯತ ಸದಸ್ಯರು ಆಗಿರುವುದಿಲ್ಲ. ನಮ್ಮ ಮತ್ತು ಅವರ ಮಧ್ಯೆ ಹೂಲಿಕೆ ಮಾಡಿದ್ದರೆ ನಾವು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲರು ಎಂದರೆ ಸರಿ. ಈ ದಾವೆಯಲ್ಲಿ ಪ್ರತಿವಾದಿಯರು ಏನು ಸಾಧನೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ನನಗೆ ವಕೀಲರು ಓದಿ ಹೇಳಿರುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯರ ದಾವಾ ಸ್ಥಳದ ಮೇಲೆ ಯಾವುದೆ ಹಕ್ಕು ಕೇಳುತ್ತಿಲ್ಲ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯ ತಂಟತಕರಾರಿಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ ಎಂದರೆ ನನಗೆ ಈಗ ನೆನಪಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆ ಹಾಕುವ ಸಮಯದಲ್ಲಿ ಅಂದರೆ 6 ತಿಂಗಳ ಹಿಂದೆ ವಕೀಲರು ಲಿಖಿತ ಹೇಳಿಕೆಯನ್ನು ಓದಿ ಹೇಳಿರುತ್ತಾರೆ. ಆ ಸಮಯದಲ್ಲಿ ವಕೀಲರು ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಯ ತಂಟತಕರಾರಿಗೆ ಹೋಗುವುದಿಲ್ಲ ಎಂಬ ಅಂಶವನ್ನು ಹೇಳಿರುವುದಿಲ್ಲ. ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ನಮ್ಮ ಆಸ್ತಿಯ ಮೇಲೆ ಸುಳ್ಳು ಸಾಧನೆ ಮಾಡುತ್ತಿರುವ ಬಗ್ಗೆ ಹೇಳಿರುತ್ತಾರೆ. ಪ್ರತಿವಾದಿಯರು ಹಿಂದೆ ಡಿಕ್ರಿ ಆದ ಜಾಗದಲ್ಲಿ ಬೋರವೇಲ್ ವಿಚಾರದಲ್ಲಿ ಅವರ ಸ್ವಾಧೀನತೆ ಬರುತ್ತಿದ್ದಾರೆ ಎಂದು ಸಾಧನೆ ಮಾಡುತ್ತಿದ್ದಾರೆ ಎಂದು ವಕೀಲರು ಹೇಳಿರುತ್ತಾರೆ. ಬೋರವೆಲ್ ಇರುವ ಜಾಗ ಸರ್ವೇ ನಂಬ್ರ 31/5 ಆಗಿರುತ್ತದೆ. ಸರ್ವೇ ನಂಬ್ರ 31/5 ರ 68 ಸೆಂಟ್ಸ ಸ್ಥಳದ ಪೂರ್ವ ದಿಕ್ಕಿನಲ್ಲಿ ಬೋರವೆಲ್ ಇರುತ್ತದೆ . ಸದ್ರಿ ಬೋರವೆಲನ್ನು ಪಂಚಾಯತನವರು ಸುಮಾರು 20 ವರ್ಷಗಳ ಹಿಂದೆ ಹಾಕಿರುತ್ತಾರೆ. ನನ್ನ ತಂದೆಯವರು ಈ ಹಿಂದೆ ನಾಗಪ್ಪ ಗಾಣಿಗ ಮತ್ತು ಗ್ರಾಮ ಪಂಚಾಯತ ನಾಡಾ ಇವರ ವಿರುದ್ದ ದಾವೆಯನ್ನು ಹೂಡಿರುತ್ತಾರೆ. ಈ ಹಿಂದೆ ಮೃತ 1 ನೇ ಪ್ರತಿವಾದಿಯು ಬೋರವೇಲ್ ಹಾಕಿದ ಸ್ಥಳ ತನ್ನ ಸ್ಥಳ ಎಂದು

ಹೇಳಿದ್ದಕ್ಕಾಗಿ ಆತನ ವಿರುದ್ದ 20 ವರ್ಷ ಹಿಂದೆ ದಾವೆಯನ್ನು ಹೂಡಿದ್ದೇವು, ಸದ್ರಿ ದಾವೆ ಡಿಕ್ರಿ ಆಗಿರುತ್ತದೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿರುತ್ತೇವೆ. ಡಿಕ್ರಿ ಪ್ರಕಾರ ಬೋರವೇಲ್ ತೆಗೆಯಲು ಅಮಲ್ಜಾರಿ ಪ್ರಕರಣ ಹೂಡಿರುವುದಿಲ್ಲ. 1 ನೇ ಪ್ರತಿವಾದಿಯು ಯಾವತ್ತು ಬೋರವೇಲ್ ತನ್ನ ಜಾಗದಲ್ಲಿ ಇದೆ ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆತನ ವಿರುದ್ಧ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ.

ಜಲಜಮ್ಮ ಶೆಡ್ತಿಯವರು ನನ್ನ ತಂದೆಯ ತಾಯಿ. ಜಲಜಮ್ಮ ಶೆಡ್ತಿಯವರನ್ನು ಭೂ ಮಾಲೀಕರಾಗಿ ತೋರಿಸಿ ಗೇಣಿ ಹಕ್ಕು ಕೋರಿ 1 ನೇ ಪ್ರತಿವಾದಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಸ್ಥಳಕ್ಕೆ ತಾಗಿ ದಕ್ಷಿಣ ದಿಕ್ಕಿಗೆ ಮುತ್ತು ಪೂಜಾರಿ ಸ್ಥಳ ಇರುತ್ತದೆ ಎಂದರೆ ಸರಿ. ಸದ್ರಿ ಸ್ಥಳದ ಸರ್ವೇ ನಂಬ್ರ ಗೊತ್ತಿರುವುದಿಲ್ಲ. ದಾವಾ ಸ್ಥಳಕ್ಕೆ ಸರ್ವೇ ನಂಬ್ರ 31/23 ಡಿ2 ಎ ಸ್ಥಳ ತಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬ್ರ 31/23 ಡಿ2 ಎ ಸ್ಥಳ ನಮ್ಮ ಸರ್ವೇ ನಂಬ್ರನ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಎಫ್.ಎಮ್. ಬಿ ನಕ್ಷೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ದಕ್ಷಿಣಕ್ಕೆ ಎಫ್.ಎಮ್. ಬಿ ನಕ್ಷೆಯ ಪ್ರಕಾರ ಸರ್ವೇ ನಂಬ್ರ 31/27 ಮತ್ತು 31/23 ಡಿ ತಾಗುತ್ತದೆ ಎಂದರೆ ಸಾಕ್ಷಿ ಮುಂದುವರೆದು ಸರ್ವೇ ನಂಬ್ರ 31/27 ಮಾತ್ರ ತಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ಥಳದ ಪಶ್ಚಿಮಕ್ಕೆ ದಾರಿಯಿದ್ದು ಅದು ಸರ್ವೇ ನಂಬ್ರ 31/5 ರಲ್ಲಿ ಹಾದುಹೋಗುತ್ತದೆ . ಈ ದಾವೆಯನ್ನು ಮಾಡುವಾಗ ದಾವಾ ಸ್ಥಳದ ಪಶ್ಚಿಮಕ್ಕೆ ದಾರಿಯಿದ್ದು ಅದು ಸರ್ವೇ ನಂಬ್ರ 31/5 ರಲ್ಲಿ ಹಾದು ಹೋಗುತ್ತದೆ ಎಂದು ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

ಸುಮಾರು 20 ವರ್ಷಗಳ ಹಿಂದೆ ಮಾಡಿದ ದಾವೆಯ ಸಮಯದಲ್ಲಿ ಸಹ ಈ ಮೇಲೆ ಹೇಳಿದ ದಾರಿಯಿತ್ತು. ಸದ್ರಿ ದಾವೆಯಲ್ಲಿ ನ್ಯಾಯಾಲಯ ಆಯುಕ್ತರು ಸ್ಥಳ ತನಿಖೆ ಮಾಡಿರುತ್ತಾರೆ. ಸದ್ರಿ ದಾವೆಗೆ ತಾಗಿ ಸರ್ವೇ ನಂಬ್ರ 31/23 ಡಿ2 ರ ಸ್ವಲ್ಪ ಅಂಶ ಉಳಿದುಕೊಳ್ಳುತ್ತದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಯರು ತಮ್ಮ ಸ್ಥಳದ ಮೇಲೆ ಅಂದರೆ ಸರ್ವೇ ನಂಬ್ರ 31/46 (ಮುಂಚೆ ಸರ್ವೇ ನಂಬ್ರ 31/23 ಡಿ2)ರ ಸಂಬಂಧಪಟ್ಟಂತೆ ವಾದಿಯರ ವಿರುದ್ದ ಕೌಂಟರ್ ಕ್ಲೇಮ್ ಕೇಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಪ್ರಶ್ನೆಃ** ಸರ್ವೇ ನಂಬ್ರ 31/46 ರ ಮೇಲೆ ನೀವು ಯಾವುದೇ ಹಕ್ಕನ್ನು ಕೇಳುತ್ತಿದ್ದೀರಾ ?
**ಉತ್ತರಃ** ಸದ್ರಿ ಸ್ಥಳ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ಸರ್ವೇ ನಂಬ್ರ 31/46 ರ ಸ್ಥಳದ ಅಂಶ ದಾವಾ ಆಸ್ತಿಗೆ ತಾಗಿ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳವನ್ನು ಪ್ರತಿವಾದಿಯರ ಸ್ಥಳವನ್ನು ಅತಿಕ್ರಮಣ ಮಾಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.7 ನ್ನು ಈಗ ನೋಡುತ್ತಿದ್ದು ಅದನ್ನು ನಾನೇ ಹಾಜರು ಮಾಡಿರುತ್ತೇನೆ.

**ಪ್ರಶ್ನೆಃ** ನಿ.ಪಿ.7 ರಲ್ಲಿ ಸರ್ವೇ ನಂಬ್ರ 31/5 ರ ದಕ್ಷಿಣಕ್ಕೆ ಸರ್ವೇ ನಂಬ್ರ 31/24 ಮತ್ತು ಸರ್ವೇ ನಂಬ್ರ 31/46 ತಾಗಿ ಕಾಣುತ್ತದೆ ?
**ಉತ್ತರಃ** ಸರ್ವೇ ನಂಬ್ರ 31/5 ರ ದಕ್ಷಿಣಕ್ಕೆ ರಸ್ತೆ ಇರುತ್ತದೆ.

ನಿ.ಪಿ.7 ರಲ್ಲಿ ಬರೆದಿರುವ ವಿಚಾರಗಳನ್ನು ಒಪ್ಪಿಕೊಳ್ಳುತ್ತೇನೆ. ಈ ದಾವೆಯನ್ನು ಹೂಡಿ ಪ್ರತಿವಾದಿಯರ ವಿರುದ್ದ ಏಕತೆರಪಿ ನಿರ್ಬಂಧ ಆಜ್ಞೆಯನ್ನು ಪಡೆದು ಪ್ರತಿವಾದಿಯರ ಆಸ್ತಿಯನ್ನು ಅತಿಕ್ರಮಣ ಮಾಡಲು ಪ್ರಯತ್ನಿಸುತ್ತೇವೆ ಎಂದರೆ ಸರಿಯಲ್ಲ. ಹಾಗೆ ಪ್ರಯತ್ನ ಮಾಡಿದ್ದು ದಿಃ 04-05-2016 ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**